## ೨೩. ಶ್ರೀ ರಾಘವೇಂದ್ರ ಅಷ್ಟೋತ್ತರ

ಜಯ ಜಯವೀವೆ ರಾಘವೇಂದ್ರ । ಭವ ಭಯ ನಾಶಕ ರಾಘವೇಂದ್ರ ॥

ತುಂಗಾತೀರದ ರಾಘವೇಂದ್ರ । ಮಂಗಳ ಮಹಿಮನೆ ರಾಘವೇಂದ್ರ ॥
ಅಂಗರಹಿತರಿಗೆ ರಾಘವೇಂದ್ರ । ತಿಮ್ಮಣ್ಣನ ಸುತ ನೀ ರಾಘವೇಂದ್ರ ॥೧॥
ಕಂಗಳಿಲ್ಲದವರಿಗೆ ರಾಘವೇಂದ್ರ । ಬೊಮ್ಮ ಮಾರುತಿ ಪ್ರಿಯ ರಾಘವೇಂದ್ರ ॥
ವೆಂಕಟನಾಮಕ ರಾಘವೇಂದ್ರ । ಸಂಕಟಹಾರಕ ರಾಘವೇಂದ್ರ ॥೨॥

ವೀಣಾಪಂಡಿತ ರಾಘವೇಂದ್ರ । ಗಾನವಿಶಾರದ ರಾಘವೇಂದ್ರ ॥
ಸರಸ್ವತೀ ಪತಿ ರಾಘವೇಂದ್ರ । ಸರಸ್ವತಿ ವಿದ್ಯಾ ರಾಘವೇಂದ್ರ ॥೩॥
ಕುಂಭಕೋಣವಾಸ ರಾಘವೇಂದ್ರ । ಸುಧೀಂದ್ರ ಶಿಷ್ಯ ರಾಘವೇಂದ್ರ ॥
ಪರಿಮಳ ಪಂಡಿತ ರಾಘವೇಂದ್ರ । ಭಾಷ್ಯಕಾರ ಗುರು ರಾಘವೇಂದ್ರ ॥೪॥

ಶಿಷ್ಯರ ವಿದ್ಯೆ ರಾಘವೇಂದ್ರ । ಆಯಾಸದಿಂ ಬರೆ ರಾಘವೇಂದ್ರ ।
ಗಂಧವ ತೇಯೆನೆ ರಾಘವೇಂದ್ರ । ಅಗ್ನಿಸೂಕ್ತದಿಂ ರಾಘವೇಂದ್ರ॥೫॥
ವಿಪ್ರರು ಲೇಪಿಸೆ ರಾಘವೇಂದ್ರ । ಕ್ಷಿಪ್ರದಿ ಮೈಯುರಿ ರಾಘವೇಂದ್ರ।
ಶರಣು ಹೊಗಲು ರಾಘವೇಂದ್ರ । ವರುಣ ಸೂಕ್ತದಿಂ ರಾಘವೇಂದ್ರ ॥೬॥

ಚಂದನವಾಯಿತು ರಾಘವೇಂದ್ರ । ಸುತನಿಗೆ ಮುಂಜಿಯು ರಾಘವೇಂದ್ರ ॥
ಸನ್ಯಾಸಿಯಾಗಲು ರಾಘವೇಂದ್ರ । ಶಾರದಾಜ್ಞೆಯು ರಾಘವೇಂದ್ರ ॥೭॥
ಆಶ್ರಮ ಧರಿಸಿದ ರಾಘವೇಂದ್ರ । ಪಿಶಾಚಿಯಾಗೆ ಸತಿ ರಾಘವೇಂದ್ರ ॥
ಮೋಕ್ಷವ ಗೈಸಿದ ರಾಘವೇಂದ್ರ । ಚತುಃಷಷ್ಟಿ ಕಲೆಯಿಂದ ರಾಘವೇಂದ್ರ ॥೮॥

ಅತುಳ ಪ್ರಕಾಶನು ರಾಘವೇಂದ್ರ । ಮೊದಲಿನ ಗುರುವು ರಾಘವೇಂದ್ರ ॥
ಯಾದವೇಂದ್ರರು ರಾಘವೇಂದ್ರ । ಅಧಿಕಾರ ನಮ್ಮದು ರಾಘವೇಂದ್ರ ॥೯॥
ಅಧಿಕ ತೊಂದರೆ ಕೊಡೆ ರಾಘವೇಂದ್ರ । ಹರಿಯ ಸ್ಮರಿಸಲು ರಾಘವೇಂದ್ರ॥
ಪರಿಹಾರವಾಯಿತು ರಾಘವೇಂದ್ರ । ಬದ ವೆಂಕಣ್ಣಗೆ ರಾಘವೇಂದ್ರ ॥೧೦॥

ಒಡೆಯನ ದಯೆಯಿಂದ ರಾಘವೇಂದ್ರ । ದಿವಾನಗಿರಿ ಬರೆ ರಾಘವೇಂದ್ರ ॥
ದಿವಾನ ದೊರೆಗಳ ರಾಘವೇಂದ್ರ । ಮುಸಲ್ಮಾನ ದೊರೆ ರಾಘವೇಂದ್ರ ॥೧೧॥
ತಟ್ಟೇಲಿ ಭೋಜನ ರಾಘವೇಂದ್ರ । ಬಟ್ಟೆಯ ಮುಚ್ಚಿರೆ ರಾಘವೇಂದ್ರ ॥
ತೀರ್ಥವ ಪ್ರೋಕ್ಷಿಸೆ ರಾಘವೇಂದ್ರ । ತಟ್ಟೇಲಿ ಫಲಪುಷ್ಪ ರಾಘವೇಂದ್ರ ॥೧೨॥

ವಂದಿಸಿದನು ದೊರೆ ರಾಘವೇಂದ್ರ । ಮಾನ್ಯಗಳನು ಕೊಡೆ ರಾಘವೇಂದ್ರ ॥
ದೊರೆ ಆ ನೆನಪಿಗೆ ರಾಘವೇಂದ್ರ । ಗೋಪುರವಿರಿಸಿದ ರಾಘವೇಂದ್ರ ॥೧೩॥

ವೆಂಕಣ್ಣಗೆ ಪೇಳೆ ರಾಘವೇಂದ್ರ । ಮಾದಾವರದಿ ರಾಘವೇಂದ್ರ ॥
ಕೆರೆಯ ಏರಿಯ ಮೇಲೆ ರಾಘವೇಂದ್ರ । ಕರಿಯ ಶಿಲೆಯೊಳು ರಾಘವೇಂದ್ರ ॥೧೪॥

ವೃಂದಾವನ ಮಾಡೆ ರಾಘವೇಂದ್ರ । ಉಳಿದಾ ಶಿಲೆಯೊಳು ರಾಘವೇಂದ್ರ ॥
ಮಾರುತಿಯನು ಮಾಡಿ ರಾಘವೇಂದ್ರ । ಕೀರುತಿ ಪಡೆದನು ರಾಘವೇಂದ್ರ ॥೧೫॥
ಉತ್ತಮ ದಿನದೊಳು ರಾಘವೇಂದ್ರ । ಶಿಷ್ಯರಿಗ್ಹೇಳುತ ರಾಘವೇಂದ್ರ ॥
ದಕ್ಷಿಣ ದ್ವಾರದಿ ರಾಘವೇಂದ್ರ । ಆ ಕ್ಷಣ ಹೊಕ್ಕರು ರಾಘವೇಂದ್ರ ॥೧೬॥

ಒಂದು ದಿನ ಶ್ರೀಗಳು ರಾಘವೇಂದ್ರ । ಮದುವೆಗೆ ಶಿಷ್ಯ ಕೇಳೆ ರಾಘವೇಂದ್ರ ॥
ಮೃತ್ತಿಕೆ ಕೊಡಲಾಗಿ ರಾಘವೇಂದ್ರ । ದ್ವಿಜಗೆ ಜಗುಲಿಯೊಳಗೆ ರಾಘವೇಂದ್ರ ॥೧೭॥
ಬ್ರಹ್ಮಪಿಶಾಚವು ರಾಘವೇಂದ್ರ । ಮೃತ್ತಿಕೆ ಭರದಿಂದ ರಾಘವೇಂದ್ರ ॥
ಸುಟ್ಟು ಬೂದಿಯಾಗೆ ರಾಘವೇಂದ್ರ । ಶಿಷ್ಯನ ಮದುವೆಯು ರಾಘವೇಂದ್ರ ॥೧೮॥

ರತ್ನಹಾರ ಭರದಿಂದ ರಾಘವೇಂದ್ರ । ಅಗ್ನಿಯೊಳಿಟ್ಟರು ರಾಘವೇಂದ್ರ ॥
ಹಾರಬೇಕೆನ್ನಲು ರಾಘವೇಂದ್ರ । ಕುಂಡದಿ ತೆಗೆದರು ರಾಘವೇಂದ್ರ ॥೧೯॥
ನೀರಿನವನು ಕೇಳೆ ರಾಘವೇಂದ್ರ । ಮೊಕ್ಷಬೇಕೆನ್ನಲು ರಾಘವೇಂದ್ರ ॥
ಮುಕ್ತಿಯ ನಿತ್ತರು ರಾಘವೇಂದ್ರ । ದೇಶಾಯಿ ಒಂದು ದಿನ ರಾಘವೇಂದ್ರ ॥೨೦॥

ಗುರುಗಳ ಕರೆಸಲು ರಾಘವೇಂದ್ರ । ಮಾವಿನ ರಸದೊಳು ರಾಘವೇಂದ್ರ ॥
ಆಡುವ ಮಗು ಬೀಳೆ ರಾಘವೇಂದ್ರ । ಮಗು ಮೃತಿ ಹೊಂದಲು ರಾಘವೇಂದ್ರ ॥೨೧॥
ಅಂದು ವ್ಯಥಿಸಿದರು ರಾಘವೇಂದ್ರ । ರಾಮನ ದಯೆಯಿಂದ ರಾಘವೇಂದ್ರ ॥
ಜೀವವನ್ನಿತ್ತರು ರಾಘವೇಂದ್ರ । ಪರಿಜನ ಹರುಷದಿ ರಾಘವೇಂದ್ರ ॥೨೨॥

ತರಳನ ಕರೆದರು ರಾಘವೇಂದ್ರ । ಗುರುಗಳು ಕರುಣಿಸಿ ರಾಘವೇಂದ್ರ ॥
ಪ್ರಾಣವನಿತ್ತರು ರಾಘವೇಂದ್ರ । ಒನಕೆ ಚಿಗುರಿಸಿ ರಾಘವೇಂದ್ರ ॥೨೩॥
ವಿಪ್ರರಿಗೆ ಸಿರಿ ಬಂತು ರಾಘವೇಂದ್ರ । ಶಿಷ್ಯನ ಮಗನೊಬ್ಬ ರಾಘವೇಂದ್ರ ॥
ಬಿಸಿಲಲಿ ಬಳಲಲು ರಾಘವೇಂದ್ರ । ಶಾಟಿಲಿ ನೆರಳನು ರಾಘವೇಂದ್ರ ॥೨೪॥

ಇಚ್ಛಾಭೋಜನ ರಾಘವೇಂದ್ರ । ಜಾತಕ ಬರೆಯಲು ರಾಘವೇಂದ್ರ ॥
ಒಂದುನೂರುಮನುಜಗೆ ರಾಘವೇಂದ್ರ । ಮೂರುನೂರು ಗ್ರಂಥಕೆ ರಾಘವೇಂದ್ರ ॥೨೫॥
ಬೃಂದಾವನಕೇಳು ನೂರು ರಾಘವೇಂದ್ರ । ಪರಿಪರಿ ರೋಗಹರ ರಾಘವೇಂದ್ರ ॥
ಜಯುಜಯ ಮಂಗಲ ರಾಘವೇಂದ್ರ । ಜಯ ಜಯ ವಿಠಲದಾಸ ರಾಘವೇಂದ್ರ ॥೨೬॥

ನಿತ್ಯಾನಂದದೊಳು ರಾಘವೇಂದ್ರ । ನಿತ್ಯನಂದದೊಳು ರಾಘವೇಂದ್ರ ॥